# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಹೇಮಾವತಿ ಬಲಮೇಲ್ದಂಡೆ ನಾಲಾ ಸರಪಳಿ: 0.00 ಕಿ.ಮೀ. ನಿಂದ 96.812 ಕಿ.ಮೀ ವರೆಗೆ ಆಧುನೀಕರಣ ಕಾಮಗಾರಿಯ ಡಿ.ಪಿ.ಆರ್ ಪ್ರಸ್ತಾವನೆಗೆ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

** ** **

*ಓದಲಾಗಿದೆ :-*

1. ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ, ಬೆಂಗಳೂರು, ಇವರ ಪತ್ರ ಸಂಖ್ಯೆ:ಕಾನೀನಿ/ತಾಂತ್ರಿಕ-4/ಜೆ.ಇ-2ಎ/792/2017-18, ದಿನಾಂಕ:14-12-2017.
2. ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ, ಬೆಂಗಳೂರು, ಇವರ ಪತ್ರ ಸಂಖ್ಯೆ:ಕಾನೀನಿ/ತಾಂತ್ರಿಕ-4/ಜೆ.ಇ-2ಎ/792/2017-18/1428, ದಿನಾಂಕ:23-08-2018.

*ಪ್ರಸ್ತಾವನೆ :-*

ಮೇಲೆ ಓದಲಾದ ಪತ್ರಗಳಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು, ಇವರು ಉಲ್ಲೇಖಿತ ವಿಷಯದ ಬಗ್ಗೆ ಪ್ರಸ್ತಾವನೆ ಸಲ್ಲಿಸುತ್ತಾ, ಹೇಮಾವತಿ ನದಿಗೆ ಅಡ್ಡಲಾಗಿ ಹಾಸನ ಜಿಲ್ಲೆಯ ಗೊರೂರು ಗ್ರಾಮದ ಬಳಿ 37.103 ಟಿ.ಎಂ.ಸಿ ನೀರಿನ ಸಾಮರ್ಥ್ಯದ ಜಲಾಶಯವನ್ನು ನಿರ್ಮಿಸಲಾಗಿದ್ದು, ಹೇಮಾವತಿ ಜಲಾಶಯವು ಹೇಮಾವತಿ ಎಡದಂಡೆ ನಾಲೆ, ಹೇಮಾವತಿ ಬಲದಂಡೆ ನಾಲೆ ಹಾಗೂ ಹೇಮಾವತಿ ಬಲಮೇಲ್ದಂಡೆ ನಾಲೆ (ಒಟ್ಟು 03 ಮುಖ್ಯ ನಾಲೆ) ಗಳನ್ನು ಹೊಂದಿರುತ್ತದೆ ಮತ್ತು ಹೇಮಾವತಿ ಎಡದಂಡೆ ನಾಲೆಯ ಸರಪಳಿ 72.267 ಕಿ.ಮೀ. ನಲ್ಲಿ 02 ಶಾಖಾ ನಾಲೆಗಳನ್ನು ಹೊಂದಿರುತ್ತದೆ ಎಂದು ವರದಿ ಮಾಡಿರುತ್ತಾರೆ.

2. ಈ ನಾಲೆಗಳಲ್ಲಿ ಒಂದಾದ ಹೇಮಾವತಿ ಬಲಮೇಲ್ದಂಡೆ ನಾಲೆಯು ಹೇಮಾವತಿ ಅಣೆಕಟ್ಟೆಯ ಬಲಭಾಗದಿಂದ ಪ್ರಾರಂಭವಾಗಿ ಅರಕಲಗೂಡು, ಹೊಳೆನರಸೀಪುರ ಮತ್ತು ಕೆ.ಆರ್.ನಗರ ತಾಲ್ಲೂಕುಗಳ ಒಟ್ಟು 56,000 ಎಕರೆ ಪ್ರದೇಶಕ್ಕೆ ನೀರನ್ನು ಬೆಳೆಗಳಿಗಾಗಿ ಒದಗಿಸಲು ನಿರ್ಮಿಸಲಾಗಿದೆ. ಈ ನಾಲೆಯು 97 ಕಿ.ಮೀ ಉದ್ದವಿದ್ದು, ಒಟ್ಟು 41 ವಿತರಣಾ ನಾಲೆಗಳನ್ನು ಹೊಂದಿರುತ್ತದೆ. ನಾಲೆಯ ನೀರಿನ ಹರಿವಿನ ಸಾಮರ್ಥ್ಯವು 907 ಕ್ಯೂಸೆಕ್ಸ್‌ಗಳಾಗಿದ್ದು, ತರಿ ಮತ್ತು ಅರೆ ಖುಷ್ಕಿ ಬೆಳೆಗಳಿಗೆ ನೀರನ್ನು ಒದಗಿಸಲಾಗುತ್ತಿದೆ. ಹೇಮಾವತಿ ಬಲಮೇಲ್ದಂಡೆ ನಾಲೆಯನ್ನು 1978 ರಲ್ಲಿ ಪ್ರಾರಂಭಿಸಿ 1991-92ನೇ ಸಾಲಿನಿಂದ ಪೂರ್ಣಗೊಳಿಸಿ ಕಾಲುವೆಯಲ್ಲಿ ನೀರನ್ನು ಹರಿಸಲಾಗುತ್ತಿದೆ.

3. ಸದರಿ ನಾಲೆಯನ್ನು ನಿರ್ಮಿಸಿ ಸುಮಾರು 20 ವರ್ಷಗಳಿಗೂ ಅಧಿಕ ಸಮಯವಾಗಿದ್ದು, ಇದರಿಂದಾಗಿ ನಾಲೆಯ ಏರಿಯು ಶಿಥಿಲವಾಗಿರುವುದು, ಅಡ್ಡಮೋರಿಗಳು ಶಿಥಿಲವಾಗಿರುವುದು, ಲೈನಿಂಗ್ ಹಾಳಾಗಿರುವುದು ಮುಂತಾದ ಕಾರಣಗಳಿಂದಾಗಿ ಮುಖ್ಯ ನಾಲೆ ಹಾಗೂ ವಿತರಣಾ ನಾಲೆಗಳಲ್ಲಿ ಕೊನೆಯ ಭಾಗದವರೆಗೂ ಸಮರ್ಪಕವಾಗಿ ನೀರು ಹರಿಸಲು ಸಾಧ್ಯವಾಗಿರುವುದಿಲ್ಲ. ಇದರಿಂದಾಗಿ ಸದರಿ ನಾಲೆಯಲ್ಲಿ 56,000 ಎಕರೆಗೆ ಬದಲಾಗಿ 42,830 ಎಕರೆಯಲ್ಲಿ ಮಾತ್ರ ಬೆಳೆ ಬೆಳೆದಿದ್ದು, ಸದರಿ ಬೆಳೆಗಳಿಗೆ ನೀರು ಕರವನ್ನು ವಿಧಿಸಲಾಗಿರುತ್ತದೆ. ಉಳಿದ 13,170 ಎಕರೆ ನೀರಾವರಿಯಿಂದ ವಂಚಿತವಾಗಿರುತ್ತದೆ. ಇದರಿಂದಾಗಿ ಸದರಿ ನಾಲೆಯಲ್ಲಿ ವಿನ್ಯಾಸ ಮಾಡಲಾದ 887 ಕ್ಯೂಸೆಕ್ಸ್ ನೀರನ್ನು ಹರಿಸಲು ಸಾಧ್ಯವಾಗಿರುವುದಿಲ್ಲ.

4. ಈ ರೀತಿ ನೀರಾವರಿಯಿಂದ ವಂಚಿತವಾಗಿರುವ ಪ್ರದೇಶಕ್ಕೆ ಸಮರ್ಪಕವಾಗಿ ನೀರು ಹರಿಸಲು ಅನುಕೂಲವಾಗುವಂತೆ ನಾಲೆಯನ್ನು ಆಧುನೀಕರಣಗೊಳಿಸಲು ಉದ್ದೇಶಿಸಲಾಗಿದೆ. ಈ ಹಿನ್ನೆಲೆಯಲ್ಲಿ ನಾಲೆಯ ಆಧುನೀಕರಣಕ್ಕೆ ಪೂರಕವಾಗಿ ನಾಲೆಯ ಹಾಲಿ ಸ್ಥಿತಿಗತಿಗಳನ್ನು ಅವಲೋಕಿಸಿ, ಆಧುನೀಕರಣಗೊಳಿಸುವ ಕಾಮಗಾರಿಯ ಡಿ.ಪಿ.ಆರ್ ನಲ್ಲಿ ಹೇಮಾವತಿ ಬಲಮೇಲ್ದಂಡೆ ನಾಲೆಯಲ್ಲಿ 887 ಕ್ಯೂಸೆಕ್ಸ್ ನೀರನ್ನು ಹರಿಸಲು ವಿನ್ಯಾಸ ಮಾಡಲಾಗಿದೆ. ಸದರಿ ಪ್ರಸ್ತಾವನೆಗೆ ದಿನಾಂಕ:21-11-2017 ರಂದು ನಡೆದ ಕಾವೇರಿ ನೀರಾವರಿ ನಿಗಮದ 60ನೇ ಮಂಡಳಿಯ ಸಭೆಯು ಅನುಮೋದನೆ ನೀಡಿರುತ್ತದೆ.

.....2..,

5. ಈ ಹಿನ್ನೆಲೆಯಲ್ಲಿ, ಹೇಮಾವತಿ ಬಲಮೇಲ್ದಂಡೆ ನಾಲೆಯ ಸರಪಳಿ: 0.00 ಕಿ.ಮೀ. ನಿಂದ 96.812 ಕಿ.ಮೀ.ವರೆಗೆ ಆಧುನೀಕರಣ ಕಾಮಗಾರಿಯ ರೂ.380.07 ಕೋಟಿಗಳ ಮೊತ್ತದ ವಿವರವಾದ ಅಂದಾಜು ಪ್ರಸ್ತಾವನೆಗೆ ಆಡಳಿತಾತ್ಮಕ ಅನುಮೋದನೆ ನೀಡುವಂತೆ ಕೋರಿ ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ, ಇವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

6. ಸದರಿ ಪ್ರಸ್ತಾವನೆಯನ್ನು ಸರ್ಕಾರದ ಮಟ್ಟದಲ್ಲಿ ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

**<u>ಸರ್ಕಾರಿ ಆದೇಶ ಸಂಖ್ಯೆ : ಜಸಂಇ 197 ಎನ್‌ಹೆಚ್‌ಪಿ 2017,</u>**
**<u>ಬೆಂಗಳೂರು, ದಿನಾಂಕ : 11-01-2019</u>**

ಹೇಮಾವತಿ ಬಲಮೇಲ್ದಂಡೆ ನಾಲೆಯ ಸರಪಳಿ: 0.00 ಕಿ.ಮೀ. ನಿಂದ 96.812 ಕಿ.ಮೀ.ವರೆಗೆ ಆಧುನೀಕರಣ ಕಾಮಗಾರಿಯ ರೂ.380.07 ಕೋಟಿ (ರೂಪಾಯಿ ಮುನ್ನೂರ ಎಂಬತ್ತು ಕೋಟಿ ಏಳು ಲಕ್ಷಗಳು ಮಾತ್ರ) ಗಳ ಮೊತ್ತದ ವಿವರವಾದ ಅಂದಾಜು ಪ್ರಸ್ತಾವನೆಗೆ ಸರ್ಕಾರದ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

2. ಈ ಆದೇಶವನ್ನು ಆರ್ಥಿಕ ಇಲಾಖೆಯು ತನ್ನ ಟಿಪ್ಪಣಿ ಸಂಖ್ಯೆ:ಆಇ 647 ಆಕೋ-1/2018, ದಿನಾಂಕ:05-12-2018, ರಲ್ಲಿ ಹಾಗೂ ಯೋಜನಾ ಇಲಾಖೆಯ ತನ್ನ ಟಿಪ್ಪಣಿ ಸಂಖ್ಯೆ:ಪಿಡಿ 02 ಎಂಸಿಎಂ 2018, ದಿನಾಂಕ:08-01-2018, ರಲ್ಲಿ ನೀಡಲಾದ ಸಹಮತಿಗಳನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ
11/01/19
(ಬಿ.ಹರಿನಾರಾಯಣ)
ಸರ್ಕಾರದ ಅಧೀನ ಕಾರ್ಯದರ್ಶಿ (ತಾಂತ್ರಿಕ-2)
ಜಲ ಸಂಪನ್ಮೂಲ ಇಲಾಖೆ.

<u>ಇವರಿಗೆ</u> :-

1. ಪ್ರಧಾನ ಮಹಾಲೇಖಪಾಲರು, (ಸಾಮಾನ್ಯ ಮತ್ತು ಸಾಮಾಜಿಕ ವಲಯ ಲೆಕ್ಕಪರಿಶೋಧನ), ಕರ್ನಾಟಕ, ಬೆಂಗಳೂರು.
2. ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ, ಬೆಂಗಳೂರು.
3. ಮುಖ್ಯ ಇಂಜಿನಿಯರ್, ಹೇಮಾವತಿ ಯೋಜನಾ ವಲಯ, ಗೊರೂರು.
4. ವಿಶೇಷಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ (ಲೋ.ಇ. ಆರ್ಥಿಕ ಕೋಶ), ವಿಧಾನ ಸೌಧ, ಬೆಂಗಳೂರು.
5. ಸರ್ಕಾರದ ಉಪ ಕಾರ್ಯದರ್ಶಿ (ಸಚಿವ ಸಂಪುಟ), ಕರ್ನಾಟಕ ಸರ್ಕಾರ (ಪ್ರಕರಣ ಸಂಖ್ಯೆ:ಸಿ-33/2019, ದಿನಾಂಕ:10-01-2019).
6. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.